# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 414 |
| 2 | ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 16-02-2023 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆ ಹಾನಿ ತಡೆಯುವ ಸಲುವಾಗಿ ವೃಷಭಾವತಿ, ಹೆಬ್ಬಾಳ, ಕೋರಮಂಗಲ, ಚಲ್ಲಘಟ್ಟ ವ್ಯಾಲಿ ಹಾಗೂ ರಾಜಕಾಲುವೆಗಳ ಸಮಗ್ರ ಅಭಿವೃದ್ಧಿಗೆ ಸರ್ಕಾರ ಈವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು;</td><td>ಬಿಬಿಎಂಪಿ ವ್ಯಾಪ್ತಿಯಲ್ಲಿ ಮಳೆ ಹಾನಿ ತಡೆಯುವ ಸಲುವಾಗಿ ವೃಷಭಾವತಿ, ಹೆಬ್ಬಾಳ, ಕೋರಮಂಗಲ, ಚಲ್ಲಘಟ್ಟ ವ್ಯಾಲಿ ಹಾಗೂ ರಾಜಕಾಲುವೆಗಳ ಸಮಗ್ರ ಅಭಿವೃದ್ಧಿಗೆ ಕರ್ನಾಟಕ ರಾಜ್ಯ ಸರ್ಕಾರವು ಈ ಕೆಳಕಂಡಂತೆ ಅನುದಾನ ನೀಡಲಾಗಿದೆ.
<table>
<tr><th>Sl.No</th><th>Year</th><th>Name of the Grants</th><th>Grants Rs. In crores</th><th>Expenditure incurred Rs. In crores</th></tr>
<tr><td>1</td><td>2018-19, 2019-20, 2020-21</td><td>Hon'ble C M Nava Nagarothana grants</td><td>820.79</td><td>658.32</td></tr>
<tr><td>2</td><td>2022-23</td><td>Hon'ble C M grants</td><td>1500.00</td><td>-</td></tr>
<tr><td>3</td><td>2022-23</td><td>Emergency grants</td><td>313.15</td><td>-</td></tr>
<tr><td>4</td><td>2022-23</td><td>Amruth Nagarothana grants</td><td>114.00</td><td>-</td></tr>
<tr><td></td><td></td><td>Total</td><td>2747.94</td><td>658.32</td></tr>
</table></td></tr>
<tr><td>ಆ)</td><td>ಈ ಸಂಬಂಧ ವಿಸ್ತೃತ ವರದಿ (ಡಿ.ಪಿ.ಆರ್) ಸಿದ್ಧಗೊಂಡಿದೆಯೇ;</td><td>ಈ ಹಿಂದೆ 2007ನೇ ಸಾಲಿನಲ್ಲಿ M/s STUP ಏಜೆನ್ಸಿ ರವರಿಂದ ಬೃಹತ್ ನೀರುಗಾಲುವೆಗೆ ಸಂಬಂಧಿಸಿದಂತೆ ವಿಸ್ತೃತ ವರದಿಯನ್ನು ತಯಾರಿಸಲಾಗಿದ್ದು, ಸದರಿ ವಿಸ್ತೃತಾ ಯೋಜನಾ ವರದಿಯನ್ವಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿತ್ತು. ಪ್ರಸ್ತುತ 2022-23 ಸಾಲಿನಲ್ಲಿ ಪರಿಷ್ಕೃತವಾಗಿ ವಿಸ್ತೃತ ಯೋಜನಾ ವರದಿಯನ್ನು ವೃಷಭಾವತಿ, ಹೆಬ್ಬಾಳ, ಕೋರಮಂಗಲ - ಚಲ್ಲಘಟ್ಟ ಹಾಗೂ ಅರ್ಕಾವತಿ ಕಣಿವೆವಾರು ತಯಾರಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.</td></tr>
<tr><td>ಇ)</td><td>ಪ್ರತಿ ಮಳೆಗಾಲದಲ್ಲೂ ಎದುರಾಗುತ್ತಿರುವ ಹಾನಿಗೆ ಶಾಶ್ವತ ನಿವಾರಣೆಗಾಗಿ ಸರ್ಕಾರ ದಿಟ್ಟ</td><td>ಪ್ರತಿ ಮಳೆಗಾಲದಲ್ಲೂ ಎದುರಾಗುತ್ತಿರುವ ಹಾನಿಯ ಶಾಶ್ವತ ನಿವಾರಣೆಗಾಗಿ ಸರ್ಕಾರವು ನೀಡಿರುವ ಅನುದಾನದಲ್ಲಿ ಬೃಹತ್ ಮಳೆನೀರುಗಾಲುವೆ ಅಭಿವೃದ್ಧಿಗಾಗಿ ಹಾಗೂ ಪ್ರವಾಹವನ್ನು ತಡೆಗಟ್ಟಲು ಆರ್.ಸಿ.ಸಿ ತಡೆಗೋಡೆಗಳು ಹಾಗೂ ಕಲ್ವರ್ಟ್/ ಸೇತುವೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮೋದನೆ ನೀಡಿದ್ದು, ಸದರಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br>• ರಾಜಕಾಲುವೆಗಳು ಒತ್ತುವರಿಗಳನ್ನು ಗುರುತಿಸಿ ಕಂದಾಯ ಇಲಾಖೆಯಿಂದ ಭೂ</td></tr>
</table>

| | | |
|---|---|---|
| | ಕ್ರಮಗಳನ್ನು ಕೈಗೊಳ್ಳುವುದೇ? | ಮಾಪನ ನಡೆಸಿ ಗಡಿಯನ್ನು ಗುರುತಿಸಿ ಒತ್ತುವರಿಯಾಗಿರುವ ಸ್ಥಳಗಳನ್ನು ತೆರವುಗೊಳಿಸಲಾಗುತ್ತಿರುತ್ತದೆ.<br>• ರಾಜಕಾಲುವೆಗಳನ್ನು ಪೂರಕವಾಗಿ ಸಂಪರ್ಕಿಸಲು ಉಳಿದಿರುವಂತಹ Missing bits ಗಳನ್ನು ಗುರುತಿಸಿ ಅಭಿವೃದ್ಧಿಗೊಳಿಸಲಾಗುತ್ತಿರುತ್ತದೆ.<br>• ಕಿರಿದಾಗಿರುವಂತಹ ಸೇತುವೆ ಮತ್ತು ಕಾಲುವೆಗಳನ್ನು ನೀರು ಹರಿವೆಗೆ ಅನುಗುಣವಾಗಿ ಸರಾಗವಾಗಿ ಹರಿಯಲು ಅಗಲೀಕರಣ ಕಾಮಗಾರಿ ಕೈಗೊಳ್ಳಲಾಗಿರುತ್ತದೆ.<br>ಈ ರೀತಿ ಅಗತ್ಯ ಕ್ರಮಗಳನ್ನು ಕೈಗೊಂಡು, ಯಾವುದೇ ರೀತಿಯ ಪ್ರವಾಹ ಹಾನಿ ಉಂಟಾದಂತೆ ಕ್ರಮ ವಹಿಸಲಾಗುತ್ತಿದೆ. ಮುಂದುವರೆದು ವಿಧಾನಸಭಾ ಕ್ಷೇತ್ರವಾರು ಕಾಲುವೆಗಳ ವಾರ್ಷಿಕ ನಿರ್ವಹಣಾ ಕಾಮಗಾರಿಯನ್ನು ಸಹ ಕೈಗೆತ್ತಿಕೊಳ್ಳಲಾಗಿರುತ್ತದೆ. |

ಸಂಖ್ಯೆ: ನಅಇ 101 ಎಂಎಸ್‌ವೈ 2023 (ಇ)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ